**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**

ಸಿ.ಸಿ. ನಂ.1542/22

ಸಿಡಬ್ಲ್ಯೂ -1 ಪಿಡಬ್ಲ್ಯೂ -1

ಹೆಸರು : ಅರ್ಜುನಪ್ಪ

ತಂದೆಯ ಹೆಸರು : ತಿಪಣ್ಣ

ವಯಸ್ಸು : 53 ವರ್ಷ

ಉದ್ಯೋಗ : ಪಿ ಐ. ಲೋಕಾಯುಕ್ತ ಬೀದರ್

ವಾಸ ಸ್ಥಳ : ಬೀದರ್

ದಿನಾಂಕಃ 10-10-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ.**

ನಾನು 23-09-2020 ರಿಂದ 07-08-2023 ವರೆಗೆ ಕುರುಕುಂಟಾ ಪೊಲೀಸ ಠಾಣೆಯಲ್ಲಿ ಪಿ.ಎಸ್.ಐ. ಅಂತಾ ಸೇವೆ ಸಲ್ಲಿಸಿರುತ್ತೇನೆ.

ಈ ಅವಧಿಯಲ್ಲಿ ದಿಃ 23-5-2022ರಂದು ಸುಮಾರು 04-20 ಗಂಟೆಗೆ ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಬಾತನಿ ಬಂದಿದ್ದುಏನು ಎಂದರೆ ಕುರುಕುಂಟಾ ಗ್ರಾಮದ ರೈಲ್ವೆ ಪಟ್ಟಿ ಹತ್ತಿರು ಮುದುಕಲ್ ಕ್ರಾಸ್ ಹತ್ತಿರ ಇಬ್ಬರು ಅನಧಿಕೃತವಾಗಿ ಕಲಬೆರಕೆ ಸೇಂದಿ ಮಾರಾಟ ಮಾಡುತ್ತಿದ್ದಾರೆ ಅಂತ ಖಚಿತ ಬಾತನಿ ಬಂದ ಮೇರೆಗೆ ಪಂಚರಾದ ಚಾ ಸಾ 2 ಮತ್ತು 3 ರವರಿಗೆ ಠಾಣೆಗೆ ಬರಮಾಡಿಕೊಂಡು ಬಾತನಿಗೆ ಬಂದ ವಿಷಯವನ್ನು ಪಂಚರಿಗೆ ತಿಳಿಸಲಾಯಿತು ಸದರಿ ಯವರು ಪಂಚರಾಗಲು ಒಪ್ಪಿ ಕೊಂಡಿರುವುದರಿಂದ ಪಂಚರವರನ್ನು ಮತ್ತು ಸಿಬ್ಬಂದಿಯವರಾದ ಚಾ ಸಾ 4 ರಿಂದ 6 ರವರು ಕೂಡಿಕೊಂಡು ನಮ್ಮ ಸರ್ಕಾರಿ ಜೀಪು ನಂ್ ಕೆಎ 32 ಜಿ 717 ನೇದ್ದರಲ್ಲಿ ಕುಳಿತುಕೊಂಡು ಬಾತನಿ ಬಂದ ಸ್ಥಳಕ್ಕೆ ಹೋಗಿ ಸ್ವಲ್ಪ ದೂರದಲ್ಲಿ ನಿಂತು ನೋಡಲಾಗಿ ಸದರಿ ವ್ಯೆಕ್ತಿ ಯು ಮದ್ಯ ಮಾರಟ ಮಾಡುವುದನ್ನು ಖಚಿತ ಪಡಿಕೊಂಡು ನಾನು ಮತ್ತು ಸದರಿಯವರು ದಾಳಿ ಮಾಡಲು ಹೋದಾಗ ನಮ್ಮನ್ನು ಸಮವಸ್ತ್ರದಲ್ಲಿ ನೋಡಿ ಸ್ಥಳದಿಂದ ಓಡಿಹೋಗಿರುತ್ತಾರೆ ನಂತರ ನಾವು ಅವರಿಗೆ ಹಿಡಿಯಲು ಪ್ರಯತ್ನಿಸಿರುತ್ತೇವೆ ನಂತರ ಅವರು ಸಿಕ್ಕಿರುವುದಿಲ್ಲ. ಓಡಿ ಹೋಗಿರುವ ವ್ಯಕ್ತಿಗಳ ಹೆಸರು ಬಾತನಿ ದಾರಗಿಗೆ ವಿಚಾರಿಸಲಾಗಿ ಸದರಿಯವರ ಹೆಸರು ರಾಘವೆಂದ್ರ ತಂದೆ ಶಿವಣ್ಣಯ್ಯ ಹಾಗೂ ಮಲ್ಲಪ್ಪ ತಂದೆ ಆಶಪ್ಪ ಅಂತ ಗೊತ್ತಾಗಿದ್ದು, ಸದರಿ ಯವರು ಬಿಟ್ಟುಹೋದ ಸ್ಥಳದಲ್ಲಿ ಒಂದು ನೀಲಿ ಬಣ್ಣದ ಬ್ಯಾಲರ್ ಇತ್ತು ಹಗೂ ಹಾಗೂ ಕೆಂಪು ಬಣ್ಣದ ಜಗ್ಗುಗಳು ಇತ್ತು. ಸದರಿ ಬ್ಯಾಲರ್ ನಲ್ಲಿ 50 ಲೀ ನಷ್ಟು ಸೇಂದಿ ಇತ್ತು. ಅದರಿಂದ 2 ಬಾಟಲ್ ಸೇಂದಿಯನ್ನು ರಾಸಾಯನಿಕ ಪರೀಕ್ಷೆ ಕುರಿತು ತೆಗೆದುಕೊಂಡು ಅದಕ್ಕೆ ಬಿಳಿ ಬಟ್ಟಯಿಂದ ಸುತ್ತಿಕೊಂಡು ಹರಗಿನಿಂದ KKK ಅಂತ ಆಂಗ್ಲ ಭಾಷೆಯಲ್ಲಿ ಸೀಲ್ ಮಾಡಲಾಯಿತು. ಪಂಚರು ಹಾಗೂ ನಾವು ಸಹಿ ಮಾಡಿದ ಚೀಟಯನ್ನು ಬಾಟಲುಗಳಿಗೆ ಅಂಟಿಸಿದೆವು. ನಂತರ ಸದರಿ ಪಂಚನಾವೆಮಿಯನ್ನು ಸಾಯಂಕಾಲು 05-10 ಗಂಟೆಯಿಂದ 06-10 ಗಂಟೆಯ ವೆರೆಗ ಜರುಗಿಸಲಾಯಿತು. ಸಾಕ್ಷಿಯು ಸದರಿ ಪಂಚನಾಮಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 1 ಎಂದು ಹಾಗೂ ಅದರಲ್ಲಿರೂವ ಸಾಕ್ಷಿಯ ಸಹಿಯನ್ನು ನಿ ಪಪಿ 1(ಎ) ಎಂದು ಗುರುತಿಸಲಾಯಿತು. ನಂತರ 06-40 ಕ್ಕೆ ಮರಳಿ ಠಾಣೆಗೆ ಬಂದು ಚಾ ಸಾ 9 ರವರಿಗೆ ಮು ಮಾ ಮತ್ತು ಜಪ್ತು ಪಂಚನಾಮ ಮತುತ ್ಞಾಪನಾ ಪತ್ರವನ್ನು ನಿ ೀಡಿರುತ್ತೇನಂ ೆನೆ. ಸಾಕ್ಷಿಯು ಸದರಿ ಜ್ಞಾಪನಾ ಪತ್ರವನ್ನು ನೊಓಡಿ ಗುರುತಿಸಿದ್ದು ಅದನ್ನು ನಿ ಪಿ 2 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಸಲಾಯಿತು. ಅದೇ ರೀತಿ 2 ಬಾಟಲಿಯನ್ನು

ನೋಡಿ ಗುರುತಿಸಿರುವುದರಿಂದ ಅದನ್ನು ಮು ಮಾ 1 ಮತ್ತು 2 ಎಂದು ಗುರುತಿಸಲಾಂತು. ಸಾಕ್ಷಿಯು ನ್ಯಾಯಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>**

ನನ್ನ ಹೇಳಿಕೆಯ ಪ್ರಕಾರ ಕುಟುಕುಂಟಾ ಕ್ಕೆ ಹೋಗಬೆಕಾದರೆ 30 ನಿಮಿಷ ಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ಸಂಜೆ 05-10 ಗಂಟೆಯಿಂದ 06-10 ರ ವರೆಗೆ ಪಂಚನಾಮೆಯನ್ನು ಮಾಡಿರುತ್ತೇನೆ ಆದರೆ ನನ್ನ ಹೇಳಿಕೆಯಲ್ಲಿ ನಾನು ಮರಳಿ ಸಂಜೆ 06-00 ಗಂಟೆ ಬಂದಿರುತ್ತೇನೆ ಎಂದರೆ ಸಾಕ್ಷಿಯು 06-40 ಗಂಟೆಗೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಚಾ ಸಾ 2 ಮತ್ತು 3 ರವರು ಕುರುಕುಂಟಾ ಗ್ರಾಮದವರು. ಚಾಸಾ 2 ಮತ್ತು 3 ರ ಬಳಿ ಯಾವುದೇ ವಾಹನ ಇಲ್ಲದೇ ಇದ್ದರೂ ಸಹ ಅವರು 04-40 ಕ್ಕೆ ಪೋಲೀಸ್ ಠಾಣೆಗೆ ಬರಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಸೇಂದಿ ಮಾರಾಟ ಮಾರುವ ಸಮಯದಲ್ಲಿ 4-5 ಜನ ಉಪಸ್ಥಿತರು ಇದ್ದರು. ನಾನು ಸದರಿಯವರಲ್ಲಿ ಸಾಕ್ಷಿ ಪಡೆದುಕೊಂಡಿರುವುದಿಲ್ಲ. ನಾನು ಚಾಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಯಾವುದೇ ಮು ಮಾ ನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ ಸಾ 4 ರಿಂದ 6 ರವರು ದಾಳಿ ಮಾಡಲು ನಮ್ಮ ಜೊತೆಯಲ್ಲಿ ಬಂದಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾಳಿ ಮಾಡುವ ಸಂದರ್ಬದಲ್ಲಿ ಆರೋಪಿತರನ್ನು ವಶಕ್ಕೆ ತಗೆದುಕೊಳ್ಳಬಹುದಾಗಿತ್ತು ಎಂದರೆ ಅವರು ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ. ಕುರುಕುಂಟಾ ಪೋಲೀಸ್ ಠಾಣೆಯಲ್ಲಿ ಅಪರಾದ ಸಂಖ್ಯೆ ಕಡಿಮೆ ಇರುತ್ತದೆ ಎಂದರೆ ಸರಿಯಲ್ಲ. ಬೇರೆ ಸ್ಟೇಷನ್ನಿಂದ ನಮ್ಮ ಠಾಣೆಯಲ್ಲಿ ಕಡಿಮೆ ಪ್ರಕರಣ ಇತ್ತು ಎಂದರೆ ಸಾಕ್ಷಿಯುಎ ನನ್ನ ಅವದಿಯಲ್ಲಿ ತೃಪ್ತಿಕರವಾಗಿ ಪ್ರಕರಣಗಳು ಇದ್ದವು ಎಂದು ನುಡಿಯುತ್ತಾರೆ. ನಾನು ಅಂಕಿ ಸಂಖ್ಯೆ ಜಾಸ್ತಿ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತಿತದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಪ್ರ. ದ. ನ್ಯಾ . ದಂ. ಸೇಡಂ.

**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>**

ಸಿ.ಸಿ. ನಂ.1542/22

ಸಿಡಬ್ಲ್ಯೂ -2 ಪಿಡಬ್ಲ್ಯೂ -2

| | | |
|---|---|---|
| ಹೆಸರು | : | ಬಲರಾಮ್ |
| ತಂದೆ ಹೆಸರು | : | ಭೀಮಪ್ಪ |
| ವಯಸ್ಸು | : | 66 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ ಸ್ಥಳ | : | ಕುರುಕುಂಟಾ |

ದಿನಾಂಕಃ 10-10-2024

ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ.</u>**

ಚಾ ಸಾ 3 ರವರು ನನಗೆ ಪರಿಚಯ ಇದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇರುವುದಿಲ್ಲ ನನಗೆ ಪೋಲೀಸರು ನನ್ನ ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿ ಅದನ್ನು ಈಗಾಲೆಲ ನಿ ಪಿ 1 ಎಂದು ಗುರತಿಸಲಾಗಿದೆ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿಸಲಾಯಿತು.)**

**<u>ವಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ದಿ.23-05-2022 ರಂದು ಸಾಯಂಕಾಲ 04-40 ಕ್ಕೆ ಸುಮಾರಿಗೆ ಆರೋಪಿತರೆಲ್ಲಾರು ಕುರುಕುಂಟಾ ರೈಲ್ವೆ ಪತ್ರಿ ಹತ್ತಿರ ಸಾರ್ವಜನಿಕ ಖಲ್ಲಾ ಜಾಗದಲ್ಲಿ ಕಲಬೆರಕೆ ಸೇಂದಿ ಮಾರಾಟ ಮಾಡುತ್ತಿದ್ದು ಅದರಲ್ಲಿ 50 ಲೀ ಸೇಂದಿ ಇತ್ತು ಮತ್ತು 2 ಲೀ ಸೇಂದಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಲಾಗಿತ್ತು ಅದೇರೀತಿ ಒಂದುಎ ನೀಲಿ ಬಣ್ಣದ ಬ್ಯಾಲರ್ ಮತ್ತು 2 ಬಣ್ಣದ ಜಗ್ಗುಗಳು ಇದ್ದು ಅದರಿಂದ ಪೋಲೀಸರ ಪಂಚನಾಮೆಯನ್ನು ಮಾಡಿರುತ್ತಾರೆ ಆದ್ದರಿಂದ ನಾನು ಅದಕ್ಕೆ ಹೆಬೆಟ್ಟಿನ ಗುರುತಿನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

**<u>ವಾಟೀ ಸವಾಲುಃ ಆರೋಪಿ ಪರ ವಕೀಲರು ವಾಟಿ ಸವಾಲು ಇಲ್ಲ ಎಂದು ಹೇಳುತ್ತಾರೆ.</u>**

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಪ್ರ. ದ. ನ್ಯಾ. ದಂ. ಸೇಡಂ.

**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**

ಸಿ.ಸಿ. ನಂ.1542/22

ಸಿಡಬ್ಲ್ಯೂ -3   ಪಿಡಬ್ಲ್ಯೂ -3

| | | |
|---|---|---|
| ಹೆಸರು | : | ಬಲರಾಮ |
| ತಂದೆ ಹೆಸರು | : | ಕೃಷ್ಣಪ್ಪ |
| ವಯಸ್ಸು | : | 22ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ ಸ್ಥಳ | : | ಕುರುಕುಂಟಾ |

ದಿನಾಂಕಃ 10-10-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ.**

ಚಾ ಸಾ 2 ರವರು ನನಗೆ ಪರಿಚಯ ಇದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇರುವುದಿಲ್ಲ ನನಗೆ ಪೋಲೀಸರು ನನ್ನ ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿ ಅದನ್ನು ಈಗಾಲೆ  ನಿ ಪಿ 1 ಎಂದು ಗುರತಿಸಲಾಗಿದೆ. ಹಾಗೂ ಅದರಲ್ಲಿರುವ ಸಾಕ್ಷಿಂಟ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿಸಲಾಯಿತು.)**

**ವಾಟೀ ಸವಾಲುಃ  ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿ.23-05-2022 ರಂದು ಸಾಯಂಕಾಲ 04-40 ಕ್ಕೆ ಸುಮಾರಿಗೆ ಆರೋಪಿತರೆಲ್ಲಾರು ಕುರುಕುಂಟಾ ರೈಲ್ವೆ ಪತ್ರಿ ಹತ್ತಿರ ಸಾರ್ವಜನಿಕ ಖಲ್ಲಾ ಜಾಗದಲ್ಲಿ ಕಲಬೆರಕೆ ಸೇಂದಿ ಮಾರಾಟ ಮಾಡುತ್ತಿದ್ದು ಅದರಲ್ಲಿ 50 ಲೀ ಸೇಂದಿ ಇತ್ತು ಮತ್ತು 2 ಲೀ ಸೇಂದಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಲಾಗಿತ್ತು ಅದೇರೀತಿ ಒಂದುಎ ನೀಲಿ ಬಣ್ಣದ ಬ್ಯಾಲರ್ ಮತ್ತು 2 ಬಣ್ಣದ ಜಗ್ಗುಗಳು ಇದ್ದು ಅದರಿಂದ ಪೋಲೀಸರ ಪಂಚನಾಮೆಯನ್ನು ಮಾಡಿರುತ್ತಾರೆ ಆದ್ದರಿಂದ ನಾನು ಅದಕ್ಕೆ ಹೆಬೆಟ್ಟಿನ ಗುರುತಿನ್ನು ಹಾಕಿರುತ್ತೇನೆ  ಎಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿ ಪರ ವಕೀಲರು ವಾಟಿ ಸವಾಲು ಇಲ್ಲ ಎಂದು ಹೇಳುತ್ತಾರೆ.**

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)    ಓ. ಹೇ. ಕೇ. ಸರಿ ಇದೆ.

ಪ್ರ. ದ. ನ್ಯಾ. ದಂ. ಸೇಡಂ.